2018 ಕ.ತೀ.ವ 285

(ಕಲಬುರಗಿ ಪೀಠ)

**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ**
**ಮತ್ತು**
**ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಲ್. ನಾರಾಯಣ ಸ್ವಾಮಿ**

**ಹೊನ್ಯಾ @ ಹೊನ್ನಪ್ಪ @ ಮೋಹನ್ –ವಿರುದ್ಧ– ಕರ್ನಾಟಕ ರಾಜ್ಯ ಅಡಿಷನಲ್ ಸ್ಟೇಟ್ ಪಬ್ಲಿಕ್ ಪ್ರಾಸಿಕ್ಯೂಟರ್ ರವರಿಂದ ಪ್ರತಿನಿಧಿತ, ಸಂಚಾರಿ ಪೀಠ ಗುಲ್ಬರ್ಗ***

ದಂಡ ಪ್ರಕ್ರಿಯಾ ಸಂಹಿತೆ, 1973ರ 374ನೇ ಪ್ರಕರಣದ ಮೇರೆಗಿನ ಕ್ರಿಮಿನಲ್ ಅಪೀಲು.

ಸೆಷನ್ಸ್ ನ್ಯಾಯಾಲಯವು ನೀಡಿದ ಶಿಕ್ಷೆ ಹಾಗೂ ದಂಡನೆಯನ್ನು ಪ್ರಶ್ನಿಸಿ ಈ ಅಪೀಲನ್ನು ಸಲ್ಲಿಸಲಾಗಿದೆ.

ಪ್ರಾಸಿಕ್ಯೂಷನ್‌ನ ಮೊಕದ್ದಮೆಯು ಕೊನೆಯದಾಗಿ ನೋಡಿದ ಸಿದ್ಧಾಂತ ಹಾಗೂ ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿತವಾಗಿದೆ.

ಯಾವುದೇ ಅಂಶದ ಮೇಲೆ ಇಡೀ ಕಾನೂನಿನ ವಾದಾಂಶವನ್ನು ಪುನರವಲೋಕಿಸಿದಾಗ, ಯಾವುದೇ ಪ್ರಕರಣದಲ್ಲಿ, ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲೆ, ನಿರ್ಣಯದ ಅದರ ಸಂದರ್ಭಗಳಿಂದ, ಆಪಾದನೆಯನ್ನು ಪೂರ್ಣವಾಗಿ ರುಜುವಾತು ಪಡಿಸತಕ್ಕದ್ದು ಮತ್ತು ಅಂಥ ಸಂದರ್ಭಗಳು, ನಿರ್ಣಾಯಕ ಸ್ವರೂಪದಲ್ಲಿರಬೇಕೆಂಬ ಕಾನೂನು ಸುಸ್ಥಾಪಿತವಾಗಿದೆಯೆಂಬುದನ್ನು ಅದು ಪ್ರತಿಪಾದಿಸುತ್ತದೆ. ಹಾಗಾಗಿ, ಎಲ್ಲಾ ಸಂದರ್ಭಗಳನ್ನು, ಸರಣಿ ರೂಪದಲ್ಲಿ ಪೂರ್ಣಗೊಳಿಸತಕ್ಕದ್ದು ಮತ್ತು ಸಾಕ್ಷ್ಯದ ಸರಣಿಯಲ್ಲಿ ಅಂತರ ಬಿಡತಕ್ಕದ್ದಲ್ಲ.

*ಕ್ರಿಮಿನಲ್ ಅಪೀಲು ಸಂ. 3651/2011, ದಿನಾಂಕ: 20ನೇ ಜುಲೈ, 2016.

ಸರ್ವೋಚ್ಚ ನ್ಯಾಯಾಲಯ ಹೇಳಲಾದಂತೆ, ಅದರ ಮೇಲೆ ಸಂಬಂಧಿಸಿದ ವಿವಿಧ ಸಂಗತಿಗಳು, ಕೊನೆಯಲ್ಲಿ ನೋಡಿದ ವಾದದ ಮೇಲೆ ಕಂಡು ಬರುತ್ತದೆ. ಸಂದರ್ಭಗಳ ಸರಣಿಯು, ಆರೋಪಿಯಿಂದ ಮಾಡಿದ ಕೊಲೆಯ ಪ್ರತಿಯೊಂದು ಸಾಧ್ಯತೆಯಿದೆ ಮತ್ತು ಅದರ ಸಾಧ್ಯತೆಯಾಗಿ ಕೊನೆಯದಾಗಿ ನೋಡಿದ ವಾದದ ಮೇಲೆ ಅವಲಂಬಿಸಬಹುದಾಗಿದೆ. ಕೇವಲ ಸಣ್ಣ ವ್ಯವಹರಣೆಯ ಪ್ರವೇಶಿಕೆಯನ್ನು ಹೊರತುಪಡಿಸಿ ಯಾವುದೇ ಸಂದರ್ಭವಿಲ್ಲದಿರುವ ಮತ್ತು ದಿನಾಂಕ 30.6.2010 ರಂದು ಸುಮಾರು ರಾತ್ರಿ 9ರಲ್ಲಿ ಕೊನೆಯದಾಗಿ ಕಂಡು ಬಂದಿದ್ದು ಎಂಬುದು ಮಾತ್ರ ಆರೋಪಿಯು, ಮೃತನನ್ನು ಕೊಲೆ ಮಾಡಿರುವುದಕ್ಕಾಗಿ ಸಾಕಾಗುವಷ್ಟು ಉದ್ದೇಶವನ್ನು ಹೊಂದಿದೆಯೆಂದು ನಿರ್ಣಯಕ್ಕೆ ಬರಲು ಸಾಕಾಗುವುದಿಲ್ಲ. ಇದಲ್ಲದೇ, ಮೃತನನ್ನು, ಕೊನೆಯಲ್ಲಿ ಎಲ್ಲಿ ನೋಡಲಾಯಿತು ಮತ್ತು ಅವನು ಮೃತನಾಗಿರುವುದು ಕಂಡು ಬಂದಿದ್ದು ಎಲ್ಲಿ ಎಂಬುದು ಅದು ಮಹತ್ವವಾಗಿದೆ ಹಾಗೂ ಸಮಯದ ಅಂತರ ಸಾಕಷ್ಟು ದೀರ್ಘವಾಗಿರುವ ಕಾರಣ ಕೊನೆಯಲ್ಲಿ ನೋಡಿದ ವಾದವು ಇದಕ್ಕೆ ಪೂರಕವಾಗಿರುವುದಿಲ್ಲವೆಂದು ಸಹ ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಪ್ರಸ್ತುತ ಪ್ರಕರಣದಲ್ಲಿ, ಆರೋಪಿ ಮತ್ತು ಮೃತನನ್ನು ರಾತ್ರಿ 9ರಲ್ಲಿ ಕೊನೆಯದಾಗಿ ನೋಡಲಾಗಿದ್ದು, ಪ್ರಾಸಾ.6ರ ಸಾಕ್ಷ್ಯವನ್ನು ಒಪ್ಪಿಕೊಂಡಲ್ಲಿ ಮತ್ತು ತದನಂತರ, ಅವನು ದಿನಾಂಕ 1.7.2010 ರಂದು ಬೆಳಗ್ಗೆ 6ರಲ್ಲಿ ಮರಣ ಹೊಂದಿರುವುದು ಕಂಡು ಬಂದಿದೆ. ಬಹುತೇಕ, ಸಮಯದ ಅಂತರ 9 ಗಂಟೆಗಳಾಗಿದೆ ಮತ್ತು ಮರಣೋತ್ತರ ಪರೀಕ್ಷೆ ವರದಿಯ ಅನುಸಾರವಾಗಿ, ಮರಣೋತ್ತರ ಪರೀಕ್ಷೆಗೆ ಮುಂಚೆ, 15 ರಿಂದ 20 ಗಂಟೆಗಳ ಮುಂಚೆ ಮರಣ ಸಂಭವಿಸಿರಬಹುದು ಮತ್ತು ಮರಣೋತ್ತರ ಪರೀಕ್ಷೆಯನ್ನು, ದಿನಾಂಕ 1.7.2010 ರಂದು ಸಂಜೆ 4ರಲ್ಲಿ ನಡೆಸಲಾಗಿದೆಯೆಂಬುದು ಸ್ಪಷ್ಟವಾಗಿದೆ. ಆದ್ದರಿಂದ, ಮರಣದ ಸಮಯವು, ಮೃತನನ್ನು ಕತ್ತು ಹಿಸುಕಿ ಸಾಯಿಸಿರುವ ಸಾಧ್ಯತೆ ಆ ಸಮಯಕ್ಕೆ ಸುಸಂಗತವಾಗಿರುವುದಿಲ್ಲ.

ಅದಕ್ಕನುಸಾರವಾಗಿ, ಪ್ರಾಸಿಕ್ಯೂಷನ್, ಆರೋಪಿ ಮತ್ತು ಮೃತನು, ಕೊನೆಯಲ್ಲಿ ಜೊತೆಗಿರುವುದು ಕಂಡು ಬಂದಿದೆಯೆಂಬುದನ್ನು ಒತ್ತಿ ಹೇಳಿರುವುದನ್ನು ಹೊರತುಪಡಿಸಿ ಒಟ್ಟಾರೆ ರುಜುವಾತುಪಡಿಸುವಂತಹ ಘಟನೆಗಳ ಸರಣಿಯ ಘಟನೆಗಳನ್ನು

**ಸುಸ್ಥಾಪಿಸಿರುವುದಿಲ್ಲ. ಕೊನೆಯಲ್ಲಿ ನೋಡಿದ ವಾದದ ಆಧಾರದ ಮೇಲೆ ಸಹಾ ಅದು ಪ್ರಕರಣವನ್ನು ರುಜುವಾತುಪಡಿಸಲು ವಿಫಲವಾಗಿರುವುದು ಕಂಡುಬರುತ್ತದೆ.**

**ಅಪೀಲನ್ನು ಅಂಗೀಕರಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು*** | ***ಪ್ಯಾರಾಗಳಲ್ಲಿ*** |
|---|---|
| *1. 2015 ಎಸ್ಎಆರ್ (ಕ್ರಿಮಿನಲ್) 1197 ನಿಜಾಮ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜ್‌ಸ್ಥಾನ್ ಸರ್ಕಾರ* | *(ಉಲ್ಲೇ) 3* |
| *2. (2002) 8 ಎಸ್‌ಸಿಸಿ 45 ಬೋಧ್‌ರಾಜ್ @ ಬೋಧ್ ಮತ್ತು ಇತರರು –ವಿರುದ್ಧ– ಜಮ್ಮು ಮತ್ತು ಕಾಶ್ಮೀರ ಸರ್ಕಾರ* | *(ಉಲ್ಲೇ) 3* |
| *3. (1996) 10 ಎಸ್‌ಸಿಸಿ 193, ಸಿ ಚೆಂಗಾ ರೆಡ್ಡಿ –ವಿರುದ್ಧ– ಆಂಧ್ರಪ್ರದೇಶ ಸರ್ಕಾರ* | *(ಉಲ್ಲೇ) 3* |
| *4. (2006) 10 ಎಸ್‌ಸಿಸಿ 681 ತ್ರಿಮುಖ್ ಮರೋತಿ ಕಿರ್‌ಖಾನ್ –ವಿರುದ್ಧ– ಮಹಾರಾಷ್ಟ್ರ ಸರ್ಕಾರ* | *(ಉಲ್ಲೇ) 3* |
| *5. (2012) 11 ಎಸ್‌ಸಿಸಿ 205 ಸುನೀಲ್ ಕ್ಲಿಪರ್ಡ್ ಡೇನಿಲ್–ವಿರುದ್ಧ– ಪಂಜಾಬ್ ಸರ್ಕಾರ* | *(ಉಲ್ಲೇ) 3* |
| *6. (2012) 4 ಎಸ್‌ಸಿಸಿ 124 ಸಂಪತ್‌ಕುಮಾರ್ –ವಿರುದ್ಧ– ಇನ್ಸ್‌ಪೆಕ್ಟರ್ ಆಫ್ ಪೊಲೀಸ್, ಕೃಷ್ಣಗಿರಿ* | *(ಉಲ್ಲೇ) 3* |
| *7. (2011) 13 ಎಸ್‌ಸಿಸಿ 621 ಮಹಮ್ಮದ್ ಆರಿಫ್ ಅಶ್ಫಾಕ್ –ವಿರುದ್ಧ– (ದೆಹಲಿ ಸರ್ಕಾರ, ಎನ್‌ಸಿಟಿ)* | *(ಉಲ್ಲೇ) 3* |

8. *(2006) 12 ಎಸ್‌ಸಿಸಿ 254*
*ರಾಜಸ್ತಾನ್ ಸರ್ಕಾರ –ವಿರುದ್ಧ– ಕಾಶೀ ರಾಮ್,* *(ಉಲ್ಲೇ) 3*
9. *(2015) 5 ಸ್ಕೇಲ್ 319*
*ಕೀರತಿ ಪಾಲ್ –ವಿರುದ್ಧ– ಪಶ್ಚಿಮ ಬಂಗಾಳ ಸರ್ಕಾರ* *(ಉಲ್ಲೇ) 3*
10. *2013 ಎಐಎಆರ್ (ಕ್ರಿಮಿನಲ್) 955*
*ಸದಾನಂದ್ ಮಂಡಲ್ –ವಿರುದ್ಧ–*
*ಪಶ್ಚಿಮ ಬಂಗಾಳ ಸರ್ಕಾರ* *(ಉಲ್ಲೇ) 3*

ಅಪೀಲುದಾರನ ಪರ: ಶ್ರೀ ಇಸ್ವರಾಜ್ ಎಸ್ ಚೌಡಾಪುರ್ – ವಕೀಲರು;
ಪ್ರತ್ಯಪೀಲುದಾರನ ಪರ: ಶ್ರೀ ಆರ್.ವಿ. ನಾಡಗೌಡ, ಹೆಚ್ಚುವರಿ ಅಡ್ವೊಕೇಟ್ ಜನರಲ್.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಆನಂದ್ ಬೈರಾರೆಡ್ಡಿ:**

ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿ ಮತ್ತು ರಾಜ್ಯದ ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್ ರವರ ವಾದಗಳನ್ನು ಆಲಿಸಲಾಗಿದೆ.

2. ದೂರುದಾರ ಮಲ್ಲಮ್ಮಳು, ಆಕೆ ಮತ್ತು ಆಕೆಯ ಪತಿಯು, ಜಂಕೇರಾ ತಾಂಡಾದ ನಿವಾಸಿಗಳಾಗಿದ್ದು, ಅದು, ಯಾದಗಿರಿ ಗ್ರಾಮೀಣ ಪೊಲೀಸ್ ಠಾಣೆಯ ಅಧಿಕಾರ ವ್ಯಾಪ್ತಿಯೊಳಗಿದೆ ಮತ್ತು ಅವರು, ಕೃಷಿ ಕಾರ್ಮಿಕರಾಗಿದ್ದಾರೆ ಹಾಗೂ ಅವರಿಗೆ ವಿವಾಹವಾಗಿ ಮೂರು ಮಕ್ಕಳಿವೆಯೆಂದು ಹೇಳಲಾಗಿದೆ. ದೂರನ್ನು ದಾಖಲಿಸಿದ್ದಾಳೆವೆಂಬುದು ಪ್ರಾಸಿಕ್ಯೂಷನ್ ಪ್ರಕರಣವಾಗಿದೆ. ದಿನಾಂಕ 30.6.2010 ರಂದು, ಸುಮಾರು 9.00 ಕ್ಕೆ ರಾತ್ರಿ ಆಕೆಯ ಅತ್ತೆ ಮತ್ತು ಇತರೇ ಗ್ರಾಮದ ಮುತ್ತಯ್ಯ, ಆಕೆಯ ಮನೆಗೆ ಬಂದಿರುತ್ತಾರೆ ಮತ್ತು ಜಿಂಕೇರಾ ತಾಂಡಾದ ಆರೋಪಿಯಾದ ಹೊನ್ಯಾ ಆಲಿಯಾಸ್ ಹೊನ್ನಪ್ಪ, ಜೀಂಕೆರಾ ತಾಂಡಾಕ್ಕೆ ಅವನ

ಜೊತೆಗೆ ಆಕೆಯ ಪತಿ ಸಾಬಣ್ಣನನ್ನು ಬರುವಂತೆ ಕೇಳುತ್ತಿದ್ದುದು ಕಂಡು ಬಂತು ಮತ್ತು ಅವನು, ಚಿಲ್ಲರೆ ಕೆಲಸಕ್ಕಾಗಿ 50/– ರೂಪಾಯಿಗಳನ್ನು ಪಾವತಿಸುತ್ತೇನೆಂದು ವಾಗ್ದಾನ ಮಾಡಿದ್ದಾನೆ ಹಾಗೂ ಅವನು, ಆರೋಪಿಯು ಕೆಡಕು ಮಾಡಲಕ್ಕೆ ಬಂದಿದ್ದು, ಅವನು ತನ್ನ ಕುಕೃತ್ಯಗಳಿಗೆ ಹೆಸರುವಾಸಿಯಾಗಿದ್ದವನೆಂದು ಅವರಿಂದ ತಿಳಿದುಕೊಳ್ಳಲಾಗಿದೆಯೆಂದು ಹೇಳಲಾಗಿದೆ. ಹಾಗಾಗಿ, ಆಕೆಯು, ಯಾವುದೇ ಕ್ರಮ ತೆಗೆದುಕೊಳ್ಳಲು ಆಯ್ಕೆ ಮಾಡಿಕೊಂಡಿರುವುದಿಲ್ಲ ಮತ್ತು ದಿನಾಂಕ 1.7.2010 ರಂದು ಸುಮಾರು ಬೆಳಗ್ಗೆ 6.30ರಲ್ಲಿ, ಯಲ್ಲಪ್ಪ ಬಂದಿದ್ದಾನೆ ಮತ್ತು ಜಿಂಕೇರಾ ತಾಂಡಾಗೆ ಅವನ ಜೊತೆಗೆ ಬರುವಂತೆ ಆಕೆಯ ಪತಿಯನ್ನು ಹೊನ್ಯಾ ಕೇಳಿದ್ದು, ಆದರೆ ಆರೋಪಿಯೊಂದಿಗೆ ಹೋಗಲು ಅವನು ನಿರಾಕರಿಸಿರುವಾಗ, ಅವನು, 50/– ರೂಪಾಯಿಗಳನ್ನು ಕೊಡುತ್ತೇವೆಂದು ವಾಗ್ದಾನ ಮಾಡಿದ್ದಾನೆ ಮತ್ತು ಆನಂತರ ಆಕೆಯ ಪತಿಯು, ಆರೋಪಿಯ ಜೊತೆಯಲ್ಲಿದ್ದನು ಎಂಬುದನ್ನು ಆಕೆಗೆ ತಿಳಿಸಲಾಗಿದೆ. ಯಲ್ಲಪ್ಪನು, ದಿನಾಂಕ 03.07.2010 ರಂದು ಸುಮಾರು ರಾತ್ರಿ 6ರಲ್ಲಿ ತನ್ನ ಹೊಲಕ್ಕೆ ಹೋದಾಗ, ಆಕೆಯ ಪತಿಯ ಮೃತದೇಹ ಅವನಿಗೆ ಕಂಡು ಬಂದಿದೆಯೆಂದು ತದನಂತರ ತಿಳಿಸಿದ್ದಾನೆ. ದೂರುದಾರಳು, ಆಕೆಯ ಅತ್ತೆ, ಭಾವ ಮತ್ತು ಮುತ್ತಯ್ಯ ಜೊತೆಯಲ್ಲಿ ರಾಮಣ್ಣನ ಜಮೀನಿಗೆ ತೆರಳಿದ್ದಾರೆ ಮತ್ತು ಜಮೀನಿನಲ್ಲಿ  ಸಾಬಣ್ಣನ ಮೃತದೇಹ ಕಂಡುಬಂದಿದೆ. ಮೃತನ ತಲೆ, ಬಲಗಣ್ಣು ಮತ್ತು ಕೆನ್ನೆಯ ಮೇಲೆ ರಕ್ತದ ಗಾಯವಾಗಿದ್ದು, ಕುತ್ತಿಗೆ ಹಿಸುಕಿರುವ ಗುರುತುಗಳಿವೆ ಮತ್ತು ಕುತ್ತಿಗೆ ಹಿಸುಕಿ ಕೊಲ್ಲಲಾಗಿದೆಯೆಂಬುದನ್ನು ಗಮನಿಸಲಾಗಿದೆ. ಆದ್ದರಿಂದ, ಹೊನ್ಯ, ಮೃತ ಸಾಬಣ್ಣನೊಂದಿಗೆ ಕೊನೆಯಲ್ಲಿ ಇದ್ದುದ್ದು ಕಂಡು ಬಂದಿದ್ದು, ದಿನಾಂಕ 30.06.2010 ಮತ್ತು ದಿನಾಂಕ 1.7.2010ರ ಮಧ್ಯರಾತ್ರಿಯ ನಡುವೆ, ಕೊಲೆ ಮಾಡಲಾಗಿದೆಯೆಂದು ಆಪಾದಿಸಲಾಗಿದೆ.

ಸದರಿ ದೂರಿನ ಆಧಾರದ ಮೇಲೆ, ಪೊಲೀಸ್ ಸಬ್–ಇನ್ಸ್‌ಪೆಕ್ಟರ್, ಭಾರತ ದಂಡ ಸಂಹಿತೆ, 1860ರ 302ನೇ ಪ್ರಕರಣದ ಅಡಿಯಲ್ಲಿ ದಂಡನೀಯ ಅಪರಾಧಗಳಿಗಾಗಿ ಪ್ರಕರಣವನ್ನು ದಾಖಲಿಸಿಕೊಂಡಿದ್ದಾರೆ ಮತ್ತು ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗಿದೆ.

ತನಿಖೆಯ ತರುವಾಯ ತದನಂತರ ಮತ್ತು ಮುಂದಿನ ವ್ಯವಹರಣೆಗಳನ್ನು, ಆರೋಪ ಪಟ್ಟಿಯನ್ನು, ಯಾದಗಿರಿಯ ಜೆಎಂಎಫ್‌ಸಿ ನ್ಯಾಯಾಲಯಕ್ಕೆ, ಸಲ್ಲಿಸಲಾಗಿದೆ. ಆರೋಪ ಪಟ್ಟಿಯನ್ನು ಸ್ವೀಕರಿಸಿದ ಮೇಲೆ, ಆ ವಿಷಯವನ್ನು, ಸೆಷನ್ಸ್ ನ್ಯಾಯಾಲಯ ಪ್ರತ್ಯೇಕವಾಗಿ ಅಧಿವಿಚಾರಣೆ ನಡೆಸಬಹುದಾದ ಅಪರಾಧವಾಗಿರುವುದರಿಂದ, ವಿಷಯವನ್ನು ಸೆಷನ್ಸ್ ನ್ಯಾಯಾಲಯಕ್ಕೆ ನೀಡಲಾಗಿದೆ ಮತ್ತು ಆರೋಪಿಯನ್ನು, ದಿನಾಂಕ 1.7.2010 ರಂದು, ಅದೇ ದಿನದಂದು ಕೂಡಲೇ ದಸ್ತಗಿರಿ ಮಾಡಲಾಗಿದ್ದು, ಮುಂದೆ ಹಾಜರುಪಡಿಸಲಾಗಿದೆ ಮತ್ತು ಆರೋಪಿಯು ತಪ್ಪಿತಸ್ಥನಲ್ಲವೆಂದು ವಾದಿಸಿದರೂ, ಸೆಷನ್ಸ್ ನ್ಯಾಯಾಲಯವು ಆರೋಪಗಳನ್ನು ರೂಪಿಸಿದೆ ಮತ್ತು ಅಧಿವಿಚಾರಣೆ ನಡೆಸಲು ಕ್ಲೇಮು ಮಾಡಿದೆ. ತದನಂತರ, ಪ್ರಾಸಿಕ್ಯೂಷನ್, 11 ಸಾಕ್ಷಿಗಳನ್ನು ಪರಿಕ್ಷೀಸಿದೆ ಮತ್ತು ಹಲವಾರು ದಸ್ತಾವೇಜುಗಳನ್ನು ಗುರುತು ಮಾಡಿದೆ ಹಾಗೂ ಮುದ್ದೆಮಾಲುಗಳನ್ನು ಗುರುತು ಮಾಡಿದೆ ಸದರಿ ಸಾಕ್ಷ್ಯದ ಆಧಾರದ ಮೇಲೆ ಮತ್ತು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆಯ, 1973ರ 313ನೇ ಪ್ರಕರಣದ ಅಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿದ ಮೇಲೆ, ಕೆಳ ನ್ಯಾಯಾಲಯ, ತೀರ್ಮಾನಕ್ಕಾಗಿ ಈ ಮುಂದಿನ ಅಂಶವನ್ನು ರೂಪಿಸಿದೆ:

> "(1) ದೂರುದಾರರ ಪತಿಯಾದ, ಸಾಬಣ್ಣನನ್ನು ದಿನಾಂಕ 30.06.2010 ಮತ್ತು 01.07.2010ರ ಮಧ್ಯ ರಾತ್ರಿಯ ಅವಧಿಯಲ್ಲಿ, ನರಹತ್ಯೆ ಮಾಡಲಾಗಿದೆಯೆಂಬುದನ್ನು ಪ್ರಾಸಿಕ್ಯೂಷನ್ ರುಜುವಾತು ಪಡಿಸಿದೆಯೇ?
>
> (2) ಮೃತ ಸಾಬಾಣ್ಣನೊಂದಿಗೆ ಜಗಳವನ್ನು ಮಾಡಿದ್ದ ಆರೋಪಿಯು ದಿನಾಂಕ 30.06.2010 ಮತ್ತು 01.07.2010ರ ಮಧ್ಯರಾತ್ರಿಯ ಸಮಯದಲ್ಲಿ, ಅವನ ತಲೆಯ ಮೇಲೆ ಕೋಲಿನಿಂದ ಹಲ್ಲೆ ಮಾಡುವ ಮೂಲಕ ಮತ್ತು ಅವನ ಕುತ್ತಿಗೆಯನ್ನು ಹಿಸುಕುವ ಮೂಲಕ ಅವನು ಕೊಲೆ ಮಾಡಿದ್ದಾನೆಂಬುದನ್ನು ಆ ಮೂಲಕ ಭಾರತ ದಂಡ ಸಂಹಿತೆ 302ನೇ ಪ್ರಕರಣದ ಅಡಿಯಲ್ಲಿ ದಂಡನೀಯ

ಅಪರಾಧವನ್ನು ಎಸಗಿದ್ದಾನೆಂದು ಮುಂದುವರೆದು ಪ್ರಾಸಿಕ್ಯೂಷನ್ ರುಜುವಾತುಪಡಿಸಿದೆಯೇ?"

ಕೆಳ ನ್ಯಾಯಾಲಯ, ಮೇಲ್ಕಂಡ ಅಂಶಗಳಿಗೆ ಸಕಾರಾತ್ಮಕವಾಗಿ ಉತ್ತರಿಸಿದೆ ಮತ್ತು ಆರೋಪಿಯನ್ನು ನಿರ್ಣೀತ ಅಪರಾಧಿಯೆಂದು ನಿರ್ಣಯಿಸಲಾಗಿದೆ ಮತ್ತು 1000/– ರೂಪಾಯಿಗಳ ಜುಲ್ಮಾನೆಯೊಂದಿಗೆ ಜೀವಿತಾವಧಿ ಕಾರಾವಾಸ ಶಿಕ್ಷೆಗೊಳಪಡಿಸಲಾಗಿದೆ. ಪ್ರಸ್ತುತ ಅಪೀಲಿನಲ್ಲಿ ಇದನ್ನು ಪ್ರಶ್ನಿಸಲಾಗಿದೆ.

3. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯು, ಪ್ರಾಸಿಕ್ಯೂಷನ್‌ನ ಇಡೀ ಪ್ರಕರಣವು ಕೊನೆಯಲ್ಲಿ ನೋಡಿದ ಸಿದ್ಧಾಂತ ಮತ್ತು ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲೆ ಅವಲಂಬಿತವಾಗಿದೆಯೆಂಬುದು ವಿವಾದಿತವಲ್ಲವೆಂದು ವಾದಿಸಿದ್ದಾರೆ. ಈ ಸಂಬಂಧದಲ್ಲಿ ಪ್ರಾಸಾ. 4 ಮತ್ತು 5ರ ಮೇಲೆ ಅವಲಂಬಿತವಾಗಿದ್ದು, ಪ್ರಾಸಾ.4, 5 ಮತ್ತು 6ರ ಪ್ರಾಸಾ.4 ಮತ್ತು 5 ಮತ್ತು ಮೃತನು ಕಲ್ಲು ಚಪ್ಪಡಿ ಮೇಲೆ ಕುಳಿತಿದ್ದಾಗ, ಆರೋಪಿಯು, ಅವರಲ್ಲಿ ಒಬ್ಬರನ್ನು ತಾಂಡಾಕ್ಕೆ ಬರುವಂತೆ ಅವನ ಜೊತೆಯಲ್ಲಿರಲು ಮನವಿ ಮಾಡಿದ್ದಾನೆ, ಅದನ್ನು ಮುತ್ತಯ್ಯ ನಿರಾಕರಿಸಿದ್ದಾನೆ. ಮೃತನೂ ಸಹ, ಹಾಗೇ ಹೋಗಲು ನಿರಾಕರಿಸಿದ್ದಾನೆ. ಅವನು, ಆರೋಪಿಯ ಜೊತೆಯಲ್ಲಿದ್ದಿಲ್ಲಿ, ಆರೋಪಿಯು 50/– ರೂಪಾಯಿಗಳ ಮೊತ್ತವನ್ನು ನೀಡುವುದಾಗಿ ಹೇಳಿದ್ದಾನೆ ಮತ್ತು ಮೃತನು ತಾನಾಗಿಯೇ ಬಂದಿದ್ದಾನೆ. ಮುತ್ತಯ್ಯ, ಕೂಡಲೇ ದೂರುದಾರಳ ಹತ್ತಿರ ಬಂದಿದ್ದಾನೆ ಮತ್ತು ಆಕೆಯ ಪತಿ ಆರೋಪಿಯ ಜೊತೆಯಲ್ಲಿದ್ದನು ಮತ್ತು ಆರೋಪಿಯು, ಒಳ್ಳೆಯ ಭಾವನೆ ಹೊಂದಿದವನಲ್ಲವೆಂಬುದನ್ನು ಆಕೆಗೆ ತಿಳಿಸಿದ್ದಾನೆ ಮತ್ತು ಆಕೆಯ ಪತಿಯು ವಾಪಸ್ಸು ಬಂದ ನಂತರ ಇದನ್ನು ಅವನಿಗೆ ತಿಳಿಸುವಂತೆ ಅವನು ಆಕೆಗೆ ತಿಳಿಸಿದ್ದಾನೆ. ಮೃತನ ಸೋದರ ಮಾವ, ರಾಮಣ್ಣನ ಜಮೀನಿನ ಮೇಲೆ ದೂರುದಾರರ ಪತಿಯ ಮೃತದೇಹವು ಕಾಣಿಸಿದಾಗ ಆಕೆಗೆ ತಿಳಿಸಿದ್ದಾರೆವೆಂಬುದು ನಂತರ ಬೆಳಗ್ಗೆ ಬಂದಿರುವ, ಪ್ರಾಸಾ.6ರ ಮೂಲಕ ಅದನ್ನು ನಂತರ ವಿವರಿಸಲಾಗಿದೆ ಮತ್ತು ಆಕೆಗೆ ತಿಳಿಸಲಾಗಿದೆ. ಈ ಸಂದರ್ಭವು, ಬೆಳಿಗ್ಗೆ 9ರಲ್ಲಿ ಮೃತನು

ಆರೋಪಿಯ ಜೊತೆಯಲ್ಲಿ, ಥಂಡಾಗೆ ಹೋಗಿದ್ದು ಕಂಡು ಬರುತ್ತದೆ. ಈ ಸಾಕ್ಷ್ಯದ ಆಧಾರದ ಮೇಲೆ, 50/– ರೂಪಾಯಿಗಳನ್ನು ಕೊಡುತ್ತೇನೆಂದಿದ್ದ ಮತ್ತು ನಿರಾಕರಿಸಿರುವ ಅಥವಾ ಪಾವತಿಸದಿರುವ ಕಾರಣದ ಮೇಲೆ ಹೊಡೆದಾಡಿರುವ ಸಾಧ್ಯತೆಯಿದೆ ಎಂಬ ಸಂಗತಿಯನ್ನು ಹೊರತುಪಡಿಸಿ ಉದ್ದೇಶದ ಕಾರಣ ಸ್ಪಷ್ಟವಾಗಿಲ್ಲವೆಂದು ಅಧಿವಿಚಾರಣಾ ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಹೊಡೆದಾಡಿರುವ ಸಾಧ್ಯತೆಯ ಪರಿಣಾಮವಾಗಿ, ಆರೋಪಿಯ, ಅವನ ಮಂಡಿಯ ಮೇಲೆ ಸಹ ಗಾಯವುಂಟಾಗಿದೆಯೆಂಬುದು ಅದರಿಂದ ಕಂಡು ಬರುತ್ತದೆ. ಅವನು ಕೊನೆಯದಾಗಿ ಮೃತನ ಜೊತೆಗಿರುವುದು ಕಂಡು ಬಂದಿರುವುದರಿಂದ ಪ್ರಾಸಿಕ್ಯೂಷನ್‌ನ ಪ್ರಕರಣವನ್ನು, ಅಧಿವಿಚಾರಣ ನ್ಯಾಯಾಲಯ ಅಂಗೀಕರಿಸಿದೆ. ಮೃತನ ಮರಣಕ್ಕೆ ಇತರೇ ಪ್ರಕರಣ ಅಥವಾ ಬೇರೆ ಕಾರಣ ಇರುವುದಿಲ್ಲವೆಂಬ ಕಾರಣದ ಆಧಾರದ ಮೇಲೆ ಆರೋಪಿಯು, ಮೃತನ ಕುತ್ತಿಗೆ ಹಿಸುಕುವ ಮೂಲಕ ಮತ್ತು ಕೋಲಿನಿಂದ ಹಲ್ಲೆ ಮಾಡಿ, ಕೊಲೆ ಮಾಡಿರುವ ಎಲ್ಲ ಸಾಧ್ಯತೆ ಇದೆಯೆಂದು ಮೃತದೇಹದ ಪಕ್ಕದಲ್ಲಿ ಕೋಲು ಇರುವುದು ಕಂಡು ಬಂದಿರುವುದು ಸಹಾ ಈ ಸಾಧ್ಯತೆಯನ್ನು ಪುಷ್ಠೀಕರಿಸುತ್ತದೆ.

ಕೊನೆಯಲ್ಲಿ ನೋಡಿರುವ ವಾದಕ್ಕೆ ಅನ್ವಯವಾಗುವಂತೆ ತಮ್ಮ ವಾದಗಳನ್ನು ಮಿತಿಗೊಳಿಸಿಕೊಂಡಿರುವ ಮಾನ್ಯ ವಕೀಲರು, ಸರ್ವೋಚ್ಚ ನ್ಯಾಯಾಲಯ, ***ನಿಜಾಮ್ ಮತ್ತು ಇನ್ನೊಬ್ಬರು –ವಿರುದ್ಧ– ರಾಜಸ್ತಾನ್ ಸರ್ಕಾರ***[1], ಪ್ರಕರಣದಲ್ಲಿ ವರದಿ ಮಾಡಿದಂತೆ ಎಚ್ಚರಿಕೆ ನೀಡಲಾಗಿದೆಯೆಂದು ವಾದಿಸಿದ್ದಾರೆ. ಯಾವುದೇ ಅಂಶದ ಮೇಲೆ ಇಡೀ ಕಾನೂನಿನ ವಾದಾಂಶವನ್ನು ಪುನರವಲೋಕಿಸಿದಾಗ, ಯಾವುದೇ ಪ್ರಕರಣದಲ್ಲಿ, ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲೆ, ನಿರ್ಣಯದ ಅದರ ಸಂದರ್ಭಗಳಿಂದ, ಆಪಾದನೆಯನ್ನು ಪೂರ್ಣವಾಗಿ ರುಜುವಾತು ಪಡಿಸತಕ್ಕದ್ದು ಮತ್ತು ಅಂಥ ಸಂದರ್ಭಗಳು, ನಿರ್ಣಾಯಕ ಸ್ವರೂಪದಲ್ಲಿರಬೇಕೆಂಬ ಕಾನೂನು ಸುಸ್ಥಾಪಿತವಾಗಿದೆಯೆಂಬುದನ್ನು ಅದು ಪ್ರತಿಪಾದಿಸುತ್ತದೆ. ಹಾಗಾಗಿ, ಎಲ್ಲಾ

1. 2015 ಎಸ್‌ಎಆರ್ (ಕ್ರಿಮಿನಲ್) 1197

ಸಂದರ್ಭಗಳನ್ನು, ಸರಣಿ ರೂಪದಲ್ಲಿ ಪೂರ್ಣಗೊಳಿಸತಕ್ಕದ್ದು ಮತ್ತು ಸಾಕ್ಷ್ಯದ ಸರಣಿಯಲ್ಲಿ ಅಂತರ ಬಿಡತಕ್ಕದ್ದಲ್ಲ. ಇದಲ್ಲದೇ, ರುಜುವಾತಿನ ಸಂದರ್ಭವು, ಅವನ ಸಾಕ್ಷ್ಯದೊಂದಿಗೆ ಓಟ್ಟಾರೆಯಾಗಿ ಸುಸಂಗತವಾಗಿದ್ದು ಆರೋಪಿಯ ತಪ್ಪಿನ ಆಧಾರದೊಂದಿಗೆ ಸುಸಂಗತವಾಗಿರತಕ್ಕದ್ದು. ಸರ್ವೋಚ್ಚ ನ್ಯಾಯಾಲಯ, ತನ್ನ ಸರಣಿ ತೀರ್ಮಾನಗಳಲ್ಲಿ ಎಂದರೆ, ***ಬೋಧ್‌ರಾಜ್ @ ಬೋಧ್ ಮತ್ತು ಇತರರು – ವಿರುದ್ಧ– ಜಮ್ಮು ಮತ್ತು ಕಾಶ್ಮೀರ ಸರ್ಕಾರ*** [2]**,** ಸರ್ವೋಚ್ಚ ನ್ಯಾಯಾಲಯ ಪುನ ಹೇಳಿದಂತೆ ಸಾಂದರ್ಭಿಕ ಸಾಕ್ಷ್ಯದ ನಿಯಮವನ್ನು ಗಮನಕ್ಕೆ ತೆಗೆದುಕೊಂಡಿದ್ದು, ಅದರಲ್ಲಿರುವಂತೆ ಸರ್ವೋಚ್ಚ ನ್ಯಾಯಾಲಯ, ಅನೇಕ ತೀರ್ಪುಗಳನ್ನು ಉದ್ದರಿಸಲಾಗಿದ್ದು, ಮುಂದಿನಂತೆ ಅಭಿಪ್ರಾಯಪಟ್ಟಿದೆ:

> “ಯಾವುದೇ ಪ್ರಕರಣವು, ಸಾಂದರ್ಭಿಕ ಸಾಕ್ಷ್ಯದ ಮೇಲೆ ಸರಿಯಾಗಿ ಅವಲಂಬಿಸಿದೆಯೆ ಎಂಬುದನ್ನು, ಈ ನ್ಯಾಯಾಲಯದಿಂದ ನಿರಂತರವಾಗಿ ಹೇಳಲಾಗಿದೆ. ತಪ್ಪಿನ ಊಹೆಯನ್ನು, ಅಪರಾಧದಲ್ಲಿ ಸಿಕ್ಕಿಸಲಾದ ಎಲ್ಲಾ ಸಂಗತಿಗಳು ಮತ್ತು ಸಂದರ್ಭಗಳಲ್ಲಿ ಮಾತ್ರ ಸಮರ್ಥಿಸಿಕೊಂಡಿದ್ದು, ಆರೋಪಿ ಅಥವಾ ಇತರೇ ಯಾರೇ ವ್ಯಕ್ತಿಗಳ ತಪ್ಪಿನ ನಿರ್ದೋಷಿತೆಯೊಂದಿಗೆ ಹೊಂದಿಕೊಳ್ಳದಿರುವುದು ಕಂಡು ಬರುತ್ತದೆ. (ಹುಕಾಮ್‌ಸಿಂಗ್ –ವಿರುದ್ಧ– ರಾಜ್‌ಸ್ಥಾನ ಸರ್ಕಾರ, ಏಐಆರ್ (1977) ಎಸ್‌ಸಿ 1063), ಈರಡು ಮತ್ತು ಇತರರು –ವಿರುದ್ಧ– ಹೈದರಾಬಾದ್ ರಾಜ್ಯ, ಏಐಆರ್ (1956) ಎಸ್‌ಸಿ 316, ಈರಭದ್ರಪ್ಪ –ವಿರುದ್ಧ– ಕರ್ನಾಟಕ ಸರ್ಕಾರ, ಏಐಆರ್ (1983 ಎಸ್‌ಸಿ 446, ಯುಪಿ ಸರ್ಕಾರ –ವಿರುದ್ಧ– ಸುಕಾಬಾವಿ ಮತ್ತು ಇತರರು, ಏಐಆರ್ (1985) ಎಸ್‌ಸಿ 1224, ಬಲ್ವಿಂದರ್ ಸಿಂಗ್ –ವಿರುದ್ಧ– ಪಂಜಾಬ್ ಸರ್ಕಾರ, ಏಐಆರ್ (1987) ಎಸ್‌ಸಿ 350, ಅಶೋಕ್‌ಕುಮಾರ್

2. (2002) 8 ಎಸ್‌ಸಿಸಿ 45

> ಚಟರ್ಜಿ –ವಿರುದ್ಧ– ಮಧ್ಯ ಪ್ರದೇಶ ಸರ್ಕಾರ ಎಐಆರ್ (1989) ಎಸ್‌ಸಿ 1890ನ್ನು ನೋಡಿ) ಅದು ಈ ಸಂದರ್ಭಗಳಿಂದ ಆರೋಪಿಯನ್ನು ತಪ್ಪಿತಸ್ಥನಂತೆ ತೀರ್ಮಾನಿಸಿದ್ದು, ಯುಕ್ತ ಸಂದೇಹ ಮೇಲೆ ರುಜುವಾತು ಪಡಿಸುವಂತೆ ಪಡೆದುಕೊಳ್ಳಲಾಗಿದೆ ಮತ್ತು ಈ ಸಂದರ್ಭಗಳಿಂದ ತೀರ್ಮಾನಕ್ಕೆ ಬರುವಂತೆ ಕೋರಿ ಅಸಲು ಸಂಗತಿಯೊಂದಿಗೆ ಹತ್ತಿರವಾಗಿ ಸಂಬಂಧಿಸಿರುವಂತೆ ತೋರಿಸಬಹುದಾಗಿದೆ. ಭಗತ್‌ರಾಮ್ –ವಿರುದ್ಧ– ಪಂಜಾಬ್ ಸರ್ಕಾರ, ಎಐಆರ್ (1954) ಎಸ್‌ಸಿ 621) ರಲ್ಲಿ ಈ ಸಂದರ್ಭಗಳ ಸಂಚಿತ ಪರಿಣಾಮದ ಸಂದರ್ಬಗಳಿಂದ ಪಡೆದುಕೊಂಡ ನಿರ್ಣಯದ ಮೇಲೆ ಈ ಪ್ರಕರಣ ಅವಲಂಬಿಸಿದೆ ಮತ್ತು ಯಾವುದೇ ಯುಕ್ತ ಸಂದೇಹ ಮೀರಿ ಅಪರಾಧಗಳ ಬಗ್ಗೆ ಮನವರಿಕೆ ಮಾಡಿ ಕೊಡಲಾಗುವುದೆಂದು ಹೇಳಲಾಗಿದೆ.''

***ಸಿ. ಚೆಂಗಾ ರೆಡ್ಡಿ –ವಿರುದ್ಧ– ಆಂಧ್ರಪ್ರದೇಶ ಸರ್ಕಾರ***[3], ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ಸಹ ಉಲ್ಲೇಖ ಮಾಡಲಾಗಿದ್ದು, ಅದರಲ್ಲಿರುವಂತೆ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:–

> ''21. ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲಿನ ಪ್ರಕರಣದಲ್ಲಿ ದೋಷ ನಿರ್ಣಯವನ್ನು ಅದರ ಸಂದರ್ಭಗಳಿಂದ, ಪಡೆದುಕೊಂಡಿದ್ದು, ಪೂರ್ಣವಾಗಿ ರುಜುವಾತುಪಡಿಸತಕ್ಕದ್ದು ಮತ್ತು ಅಂಥ ಸಂದರ್ಭಗಳ, ಸ್ವರೂಪದಲ್ಲಿ ನಿರ್ಣಯಿಸತಕ್ಕದ್ದೆಂಬುದು ಸುಸ್ಥಾಪಿತ ಕಾನೂನು ಆಗಿದೆ. ಅದೂ ಅಲ್ಲದೆ, ಈ ಎಲ್ಲಾ ಸಂದರ್ಭಗಳನ್ನು ಪೂರ್ಣಗೊಳಿಸತಕ್ಕದ್ದು ಮತ್ತು ಸರಣಿ ಸಾಕ್ಷ್ಯದಲ್ಲಿ

3. (1996) 10 ಎಸ್‌ಸಿಸಿ 193

ಅಂತರ ಬಿಡತಕ್ಕದ್ದಲ್ಲ. ಇದಲ್ಲದೇ ರುಜುವಾತುಪಡಿಸಿದ ಸಂದರ್ಭಗಳು, ಆರೋಪಿಯ ತಪ್ಪಿತ ನಿರ್ದೋಷತೆಗಳೊಂದಿಗೆ ಮಾತ್ರ ಸುಸಂಗತವಾಗಿರತಕ್ಕದ್ದು ಮತ್ತು ಓಟ್ಟಾರೆಯಾಗಿ ಅವನ ನಿರ್ದೋಷತೆಯೊಂದಿಗೆ ಅಸಂಗತವಾಗಿರುವುದು."

***ತ್ರಿಮುಖ್ ಮರೋತಿ ಕಿರಕನ್-ವಿರುದ್ಧ-ಮಹಾರಾಷ್ಟ್ರ ಸರ್ಕಾರ*** [4] ಪ್ರಕರಣದ ಉಲ್ಲೇಖವನ್ನು ಸಹ ಪಡೆದುಕೊಂಡಿದ್ದು, ಅದರಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ:

"12. ಪ್ರಸ್ತುತ ಪ್ರಕರಣದಲ್ಲಿ, ಪ್ರತ್ಯಕ್ಷ ಸಾಕ್ಷಿಯಾಗಿ ಯಾರು ಇರುವುದಿಲ್ಲ ಮತ್ತು ಪ್ರಾಸಿಕ್ಯೂಷನ್ ಮೊಕದ್ದಮೆಯು, ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿಸಿದೆ, ಸಾಂದರ್ಭಿಕ ಸಾಕ್ಷ್ಯದ ಆಧಾರದ ಮೇಲಿನ ಯಾವುದೇ ಪ್ರಕರಣದಲ್ಲಿ ಸಾಮಾನ್ಯ ನಿಯಮವು, ಅದರ ಸಂದರ್ಭಗಳಿಂದ ದೋಷಿಯೆಂದು ತೀರ್ಮಾನಕ್ಕೆ ಬರುವುದನ್ನು ಯುಕ್ತವಾಗಿ ಮತ್ತು ಸ್ಥಿರವಾಗಿ ಸುಸ್ಥಾಪಿಸತಕ್ಕದ್ದು. ಈ ಸಂದರ್ಭಗಳು, ಆರೋಪಿಯ ದೋಷವನ್ನು ಯಾವುದೇ ಲೋಪ ಇಲ್ಲದಂತೆ ನಿಶ್ಚಿತವಾಗಿ ಸೂಚಿಸತಕ್ಕದ್ದು; ಸಂಚಿತವಾಗಿ ತೆಗೆದುಕೊಂಡ ಆರೋಪಿಯಿಂದ ಮಾಡಲಾಗಿದೆಯೆಂಬ ಅಪರಾಧವನ್ನು ಎಲ್ಲ ಮಾನವ ಸಂಭಾವ್ಯತೆಯೊಂದಿಗೆ, ನಿರ್ಣಯಿಸತಕ್ಕದ್ದು ಮತ್ತು ಅದರಿಂದ ತಪ್ಪಿಸಿಕೊಳ್ಳಲಾಗದ ಸಂಪೂರ್ಣ ಸರಣಿಯನ್ನು ರೂಪಿಸುವುದು ಮತ್ತು ಆರೋಪಿಯ ದೋಷ ಮತ್ತು ಅವನ ಮುಗ್ದತೆಯೊಂದಿಗೆ ಅಸಂಗತವಾಗಿದೆವೆಂಬುದನ್ನು ಹೊರುತಪಡಿಸಿ ಯಾವುದೇ ನಿರ್ದೋಷತೆಯು ಮೇಲೆ ವಿವರಣೆಯು ಅಸಮರ್ಥವಾಗಿರತಕ್ಕದ್ದು"

4. (2006) 10 ಎಸ್‌ಸಿಸಿ 681

ಅದೇ ನಿಯಮಗಳನ್ನು ***ಸುನೀಲ್ ಕ್ಲಿಫರ್ಡ್ ಡೇನಿಲ್–ವಿರುದ್ಧ–ಪಂಜಾಬ್ ಸರ್ಕಾರ್***[5], ರಲ್ಲಿ ಪುನಃ ಹೇಳಲಾಗಿದೆ; ***ಸಂಪತ್ ಕುಮಾರ್ –ವಿರುದ್ಧ– ಇನ್ಸ್‌ಪೆಕ್ಟರ್ ಆಫ್ ಪೋಲೀಸ್, ಕೃಷ್ಣಗಿರಿ***[6] ಮತ್ತು ***ಮಹಮ್ಮದ್ ಆರಿಫ್ @ ಅಶ್ಫಾಕ್ –ವಿರುದ್ಧ– (ದೆಹಲಿ ಸರ್ಕಾರ ಎನ್‌ಸಿಟಿ)***[7] ಮತ್ತು ಇತರೇ ಪ್ರಕರಣಗಳನ್ನು ತೀರ್ಮಾನಿಸಲಾಗಿದೆ. ಸಂದೇಹಾಸ್ಪದವಿಲ್ಲದೇ, "ಕೊನೆಯದಾಗಿ ಕಂಡು ಬಂದ ವಾದವು" ಕೆಲವು ಖಚಿತತೆಯೊಂದಿಗೆ ಆರೋಪಿಯ ತಪ್ಪಿನ ಸಲುವಾಗಿನ ಅಂಶವಾಗಿದೆಯೆಂಬ ಸಂದರ್ಭಗಳ ಸರಣಿಯಲ್ಲಿನ ಸಂಬಂಧವಾಗಿದೆಯೆಂದು ಅದು ಮುಂದುವರೆದು ಅಭಿಪ್ರಾಯಪಟ್ಟಿದೆ. "ಕೊನೆಯದಾಗಿ ಕಂಡು ಬಂದ ವಾದ" ಆರೋಪಿಗೆ ರುಜುವಾತಿನ ಹೊಣೆಯನ್ನು ವರ್ಗಾಯಿಸಲು ಮತ್ತು ಮೃತನ ಮರಣಕ್ಕೆ ಕಾರಣವಾದ ಯುಕ್ತ ವಿವರ ನೀಡಿರುವಂತೆ ಆರೋಪಿಗೆ ಅವಕಾಶ ಕಲ್ಪಿಸಿದೆಯೆಂದು ಈ ನ್ಯಾಯಾಲಯಗಳು ಅಭಿಪ್ರಾಯಪಟ್ಟಿವೆ. "ಕೊನೆಯದಾಗಿ ಕಂಡು ಬಂದ ವಾದದ" ಏಕ ಮಾತ್ರ ಕಾರಣದ ಮೇಲೆ ಅಪರಾಧ ನಿರ್ಣಯವನ್ನು ಆಧರಿಸಿರುವುದು ವಿವೇಕಯುತವಾದುದಾಗಿರುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯದಿಂದ ಸುಸ್ಥಾಪಿತವಾಗಿದೆ. ಕೊನೆಯದಾಗಿ ಕಂಡು ಬಂದ ವಾದವನ್ನು ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ಸಂಪೂರ್ಣವಾಗಿ ಪರಿಗಣನೆಗೆ ತೆಗೆದುಕೊಂಡು ಅನ್ವಯಿಸತಕ್ಕದ್ದು ಮತ್ತು ಆದ್ಯತೆಯಾಗಿ ಸನ್ನಿವೇಶಗಳನ್ನು ಮನಸಿನಲ್ಲಿಟ್ಟುಕೊಳ್ಳುವುದು ಮತ್ತು ಕೊನೆಯದಾಗಿ ಹಾಗೆ ನೋಡಲಾದ ಅಂಶವನ್ನು ಅನುಸರಿಸುವುದು.

***ರಾಜಸ್ತಾನ್ ಸರ್ಕಾರ–ವಿರುದ್ಧ– ಕಾಶೀ ರಾಮ್***[8], "ಕೊನೆಯದಾಗಿ ನೋಡಿದವನು ಜೀವಂತವಾಗಿ ಕಂಡು ಬಂದ" ನೆಂಬ ನಿಯಮವನ್ನು ವಿಸ್ತರಿಸಿದ್ದು, ಸರ್ವೋಚ್ಚ ನ್ಯಾಯಾಲಯ ಈ ಮುಂದಿನಂತೆ ಹೇಳಲಾಗಿದೆ.

> "ಪ್ರಾಧಿಕಾರಗಳನ್ನು ಹೆಚ್ಚಿಸುವ ಅಗತ್ಯವಿರುವುದಿಲ್ಲ. ಈ ನಿಯಮವು, ಸುಸ್ಥಾಪಿತವಾಗಿದೆ, ಮತ್ತು ಯಾವುದೇ ಸಂಗತಿಯು,

5. (2012) 11 ಎಸ್‌ಸಿಸಿ 205
6. (2012) 4 ಎಸ್‌ಸಿಸಿ 124
7. (2011) 13 ಎಸ್‌ಸಿಸಿ 621
8. (2006) 12 ಎಸ್‌ಸಿಸಿ 254

ನಿರ್ದಿಷ್ಟವಾಗಿ ವ್ಯಕ್ತಿಯ ತಿಳಿವಳಿಕೆಗೆ ಅರಿವಿದ್ದು, ಆ ಸಂಗತಿಯನ್ನು ರುಜುವಾತುಪಡಿಸುವ ಹೊಣೆಯು ಅವನ ಮೇಲಿರುತ್ತದೆಂಬುದು ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಉಪಬಂಧಗಳು ಸ್ಪಷ್ಟವಾಗಿ ಮತ್ತು ವರ್ಗೀಕೃತವಾಗಿ ನಿರೂಪಿಸಿವೆ. ಹಾಗಾಗಿ, ವ್ಯಕ್ತಿಯು, ಮೃತನೊಂದಿಗೆ ಕೊನೆಯಲ್ಲಿ ಕಂಡು ಬಂದಿದ್ದಲ್ಲಿ, ಅವನು ಹೇಗೆ ಮತ್ತು ಯಾವಾಗ ಅವನಿಂದ ಬೇರಾದ ಎಂಬ ವಿವರವನ್ನು ನೀಡುವುದು ಕಡ್ಡಾಯವಾಗಿರುವುದು. ಅವನು ತೃಪ್ತಿಕರವಾಗಿ ಮತ್ತು ಮನದಟ್ಟಾಗುವಂತೆ ಈ ನ್ಯಾಯಾಲಯಕ್ಕೆ ಹಾಜರಾಗಿ ವಿವರವನ್ನು ನೀಡತಕ್ಕದ್ದು. ಅವನು ಹಾಗೇ ಮಾಡಿದಲ್ಲಿ ತನ್ನ ಹೊಣೆಯಿಂದ ಅವನನ್ನು ವಿಮೋಚನೆಗೊಳಿಸುವುದು. ಅವನು ತನ್ನ ವಿಶೇಷ ತಿಳುವಳಿಕೆಯೊಂದಿಗೆ ಸಂಗತಿಗಳ ಆಧಾರದ ಮೇಲೆ ವಿವರವನ್ನು ನೀಡಲು ವಿಫಲನಾದಲ್ಲಿ, ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಮೂಲಕ ಅವನ ಮೇಲೆ ಗೊತ್ತುಪಡಿಸಿದ ಹೊಣೆಯನ್ನು ನಿರ್ವಹಿಸಲು ಅವನು ವಿಫಲನಾದರೆ. ಅವನ ಮೇಲೆ ನೀಡಲಾದ ಹೊಣೆಯನ್ನು ನಿರ್ವಹಿಸುವಲ್ಲಿ ಯುಕ್ತ ವಿವರವನ್ನು ನೀಡಲು ಆರೋಪಿಯು ವಿಫಲನಾದಲ್ಲಿ, ಈ ಪ್ರಕರಣದಲ್ಲಿ ಸಾಂದರ್ಭಿಕ ಸಾಕ್ಷ್ಯದ ಮೇಲೆ ಅವಲಂಬಿತವಾಗಿ ಸಂದರ್ಭಗಳ ಸರಣಿಯಲ್ಲಿ ಹೆಚ್ಚುವರಿಯಾಗಿ ಅವರ ವಿರುದ್ಧ ರುಜುವಾತು ಪಡಿಸಲಾಗಿದೆಯೆಂದು ಭಾವಿಸುವುದು 106ನೇ ಪ್ರಕರಣವು, ಕ್ರಿಮಿನಲ್ ಅಧಿವಿಚಾರಣೆಯಲ್ಲಿ ರುಜುವಾತಿನ ಹೊಣೆಯನ್ನು ವರ್ಗಾಯಿಸಲಾಗದು, ಇದು, ಪ್ರಾಸಿಕ್ಯೂಷನ್ ಮೇಲೆ ಅವಲಂಬಿಸಿದೆ. ನಿರ್ದಿಷ್ಟವಾಗಿ ತನ್ನ ತಿಳುವಳಿಕೆಯೊಂದಿಗೆ, ಸಂಗತಿಗಳ ಮೇಲೆ ಆರೋಪಿತನು ಬೆಳಕನ್ನು ಚೆಲ್ಲದಿದ್ದಲ್ಲಿ ಯಾವುದೇ ಅಥವಾ ಅವನ ಮುಗ್ಧತೆಯೊಂದಿಗೆ ಒಪ್ಪುವ ನಿರ್ದೋಷತೆಯನ್ನು, ಸರಣಿಯನ್ನು ಪೂರ್ಣಗೊಳಿಸಲು ಅದರ ಹೆಚ್ಚುವರಿ ಸೇರಿಕೆಯಂತೆ, ಯಾವುದೇ ವಿವರ ಮಂಡಿಸಲು ಅವನು ವಿಫಲನಾದಲ್ಲಿ ಪರಿಗಣಿಸುತ್ತದೆ. ಈ

ನಿಯಮವನ್ನು, ಪುನಃ ನಯನ ಮೋರ್, ಏಐಆರ್ 1960 ಮದ್ರಾಸ್, 218ರಲ್ಲಿ ಸಂಕ್ಷೇಪವಾಗಿ ಹೇಳಲಾಗಿದೆ."

ಸದರಿ ತೀರ್ಪನ್ನು, ***ಕೀರತಿ ಪಾಲ್ –ವಿರುದ್ಧ– ಪಶ್ಚಿಮ ಬಂಗಾಳ ಸರ್ಕಾರ*** [9], ಪುನರಚ್ಚರಿಸಲಾಗಿದೆ.

ಸರ್ವೋಚ್ಚ ನ್ಯಾಯಾಲಯ, ಕೊನೆಯದಾಗಿ ಕಂಡು ಬಂದ ಸಂದರ್ಭದ ನಡುವಿನ ಸಮಯದ ಅಂತರದಷ್ಟರಮಟ್ಟಿಗೆ ಮತ್ತು ಮೃತದೇಹ ಅಥವಾ ಮರಣದ ಸಮಯವನ್ನು ಪರಿಗಣನೆಗೆ ತೆಗೆದುಕೊಂಡು ಅದಕ್ಕೆ ಸಂಬಂಧಪಟ್ಟಂತೆ, ಸಮಯದ ಅಂತರ, ದೀರ್ಘಾವಧಿಯಾಗಿದ್ದು, ಅದು "ಕೊನೆಯ ದಾಗಿ ಕಂಡು ಬಂದ ವಾದ"ದ ಆಧಾರದ ಮೇಲಿನ ನಿರ್ಣಯ ಆಧರಿಸಿರುವುದು ಅಸುರಕ್ಷಿತವಾದುದಲ್ಲ, ಪ್ರಾಸಿಕ್ಯೂಷನ್ ಮಂಡಿಸಿದ ಇತರೇ ಸಂದರ್ಭಗಳು ಮತ್ತು ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಸುರಕ್ಷಿತವೆಂದು ಅಭಿಪ್ರಾಯಪಟ್ಟಿದೆ.

ಆದ್ದರಿಂದ, ಮಾನ್ಯ ನ್ಯಾಯವಾದಿಯು, ಆರೋಪಿಯು ವಾಸವಾಗಿರುವ ತಾಂಡಾಗೆ ಮೃತನು ಅವನ ಜೊತೆಯಲ್ಲಿದ್ದು, ಆರೋಪಿಯು ಮೃತನಿಗೆ 50/– ರೂಪಾಯಿಗಳನ್ನು ನೀಡಿದ್ದನೆಂದು ವಾದಿಸಿದ್ದಲ್ಲದೇ, ಹಣವನ್ನು ಪಾವತಿಸಲು ನಿರಾಕರಿಸಿದ ಕಾರಣದಿಂದ ಆರೋಪಿ ಮತ್ತು ಮೃತನ ನಡುವೆ ಹೊಡೆದಾಟ ನಡೆದಿರುವ ಸಾಧ್ಯತೆಯಿದ್ದು, ಆರೋಪಿಯು ಮೃತನನ್ನು ಕತ್ತು ಹಿಸುಕಿ ಸಾಯಿಸಿದ ಪರಿಣಾಮವಾಗಿ, ಆತನು ಮೃತನಾಗಿದ್ದಾನೆನ್ನುವುದು ಅಸ್ವಾಭಾವಿಕ ವಾದವಾಗಿದೆ ಮತ್ತು ಪ್ರಾ.ಸಾ.4, 5 ಮತ್ತು 6 ಮೃತನು ಆರೋಪಿಯ ಜೊತೆಯಲ್ಲಿದಿದ್ದು ನೋಡಿದ್ದಾರೆ ಎಂಬ ಸಂದರ್ಭದ ಮೇಲೆ ಮಾತ್ರ ಆಧಾರವಾಗಿದೆಯೆಂದು ವಾದವನ್ನು ಮಂಡಿಸಿದ್ದಾನೆ. ಇದು, ಮಾನ್ಯ ನ್ಯಾಯವಾದಿಯು, ಪ್ರಾಸಿಕ್ಯೂಷನ್ ಮೊಕದ್ದಮೆಯನ್ನು ತಪ್ಪಾಗದಂತೆ ಸುಸ್ಥಾಪಿತಗೊಳಿಸಲು ಸಂದರ್ಭಗಳ ಸರಣಿಯು ಆಗಿದೆಯೆಂದು ಅಭಿಪ್ರಾಯಪಡುವುದಕ್ಕೆ ಸಾಕಷ್ಟಾಗುವುದಿಲ್ಲವೆಂದು ನಿವೇದಿಸಿದ್ದಾರೆ. ತಾನಾಗಿ

9. (2015) 5 ಶ್ರೇಣಿ 319

ಆಪಾದಿಸಿದ ಉದ್ದೇಶ ಸಂದೇಹಸ್ಪಾದವಾಗಿರುವಾಗ, ಪ್ರಶ್ನಿತ ಸರಣಿ ಸನ್ನಿವೇಶಗಳು ಇವೆಯೆಂದು ಆಪಾದಿತನು ತಪ್ಪಿತಸ್ಥನೆಂದು ಬೊಟ್ಟು ಮಾಡುವುದೆ. ಆದ್ದರಿಂದ, ಆರೋಪಿಯನ್ನು ರಾತ್ರಿ 9ರಲ್ಲಿ ಸ್ವಷ್ಟವಾಗಿ ನೋಡಿರುವಾಗ ಮತ್ತು ದೇಹವು, ಬೆಳಗಿನ ಜಾವ 6ರ ಸಮಯದಲ್ಲಿ ಮೃತದೇಹ ಕಂಡಿರುವಾಗ, ಮರಣೋತ್ತರ ಪರೀಕ್ಷೆಯನ್ನು 1.7.2010ರಂದು ಅಪರಾಹ್ನ 4ರಲ್ಲಿ ನಡೆಸಲಾಗಿದ್ದು, ಮರಣೋತ್ತರ ಪರೀಕ್ಷೆಗೆ ಮುಂಚಿತವಾಗಿ 15 ರಿಂದ 20 ಗಂಟೆಗಳ ಅವಧಿಯಲ್ಲಿ ಮರಣವು ಸಂಭವಿಸಿದೆಯೆಂದು ಅಂದಾಜಿಸಲಾಗಿದೆ. ದಿನಾಂಕ 30.6.2010 ಮತ್ತು 1.7.2010ರ ಮಧ್ಯ ರಾತ್ರಿಯಲ್ಲಿ ಕೊಲೆ ಮಾಡಲಾಗಿದೆಯೆಂಬ ಆಪಾದನೆಯು ಸುಸಂಗತವಾಗಿರುವುದಿಲ್ಲ. ಆರೋಪಿಯು ಕೊಲೆ ಮಾಡಿರುವ ಅಂಶದ ಆರೋಪಕ್ಕೊಳಪಡಿಸುವ ಇತರೇ ಯಾವುದೇ ಸಾಕ್ಷ್ಯದ ಕೊರತೆಯಿಂದ, ಲಾಭ ಅಥವಾ ಅನ್ಯಥಾವಾಗಿಯಾಗಲಿ, ಪ್ರಾಸಿಕ್ಯೂಷನ್, ಎಲ್ಲಾ ಯುಕ್ತ ಸಂದೇಹ ಮೀರಿ ಪ್ರಕರಣವನ್ನು ಲೆಕ್ಕ ಹಾಕಲಾಗಿದೆಯೆಂದು ಹೇಳಲಾಗದು ಎಂದು ನಿವೇದಿಸಿದ್ದಾರೆ.

ಆರೋಪಿಯನ್ನು ಅಪರಾಹ್ನ ಸುಮಾರು 4.00 ರಲ್ಲಿ ಮೃತದೇಹ ಕಾಣಿಸಿದ ಅದೇ ದಿನದಂದು ದಸ್ತಗಿರಿ ಮಾಡಲಾಗಿದೆ ಮತ್ತು ಅವನನ್ನು ಅವನ ಮನೆಯಿಂದ ದಸ್ತಗಿರಿ ಮಾಡಲಾಗಿದೆಯೆಂಬುದನ್ನು ಮುಂದುವರೆದು ಸೂಚಿಸಲಾಗಿದೆ. ಕೊಲೆ ಮಾಡಿರಬಹುದಾದ ತಪ್ಪಿತ ವ್ಯಕ್ತಿಯ ನಡವಳಿಕೆಯ ಮೇಲೆ ಮಾತ್ರ ಮಾಡಿರುವಂತಾದ್ದಾಗಿದೆ. ಘೋರಅಪರಾಧವನ್ನು ಎಸಗಿದ ತರುವಾಯ ಆರೋಪಿಯು ತಲೆ ಮರೆಸಿಕೊಂಡಿರುವುದಿಲ್ಲ, ಅಂಥ ಯಾವುದೇ ತಪ್ಪು ಸಹ ನಿರುಪಾಧಿಕವಾಗಿದ್ದು, ತಾನಾಗೀ ಕಾನೂನನ್ನು ತಲುಪಿದ ಪೈಕಿ ರಹಸ್ಯವಾಗಿ ಅಧಿವಿಚಾರಣೆ ಮಾಡಲಾಗದೆಂದು ***ಸದಾನಂದ್ ಮಂಡಲ್ –ವಿರುದ್ಧ– ಪಶ್ಚಿಮ ಬಂಗಾಳ ಸರ್ಕಾರ***[10], ಪ್ರಕರಣದಲ್ಲಿ ಅಭಿಪ್ರಾಯಪಟ್ಟಿದೆ. ಸಂದೇಹ ಮತ್ತು ಊಹೆಯ ಆಧಾರದ ಮೇಲೆ, ಅರ್ಜಿದಾರನನ್ನು, ಜೀವಾವಧಿ ಶಿಕ್ಷೆಗೆ ಅಪರಾಧಿಯೆಂದು ನಿರ್ಣಯಿಸಲಾಗಿರುವುದು ಒಟ್ಟಾರೆ ನ್ಯಾಯ ವಿಫಲತೆಯ ಪರಿಣಾಮವಾಗಿದೆಯೆಂದು ಮಾನ್ಯ ನ್ಯಾಯವಾದಿಯು ತಮ್ಮ ವಾದ

10. 2013 ಎಐಎಆರ್ (ಕ್ರಿಮಿನಲ್) 955

ಮಂಡಿಸಿದ್ದಾರೆ. ಅಪೀಲುದಾರನು, ನ್ಯಾಯ ವಿಳಂಬನೆಯಿಂದ ಈಗಾಗಲೇ ಸೆರೆಮನೆಯಲ್ಲಿ 6 ವರ್ಷಗಳು ಕಳೆದಿದ್ದಾನೆ. ಆರೋಪಿಯನ್ನು ಬಿಡುಗಡೆಗೊಳಿಸುವಂತೆ ನಿರ್ಣಯಿಸುವಂತೆ ಅವನು ಕೋರಿದ್ದಾನೆ.

4. ತನ್ನ ಸ್ವಭಾವಕ್ಕೆ ವಿಶಿಷ್ಟವಾದ ರೀತಿಯಲ್ಲಿ, ಅಧಿವಿಚಾರಣಾ ನ್ಯಾಯಾಲಯ, ನಿಸ್ಸಂಶಯವಾಗಿ ಆರೋಪಿಯನ್ನು ಅಪರಾಧಿಯೆಂದು ನಿರ್ಣಯಿಸಿರುವುದನ್ನು ಪೂರ್ಣವಾಗಿ ಸಮರ್ಥಿಸಿಕೊಂಡಿದೆಯೆಂದು ಮಾನ್ಯ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಾದವನ್ನು ಮಂಡಿಸಿ, ಸಾಕ್ಷ್ಯದ ಮೂವರು ಸಾಕ್ಷಿದಾರರು, ಮೃತನು, ಆರೋಪಿಯ ಜೊತೆಯಲ್ಲಿರುವುದನ್ನು ಕೊನೆಯಲ್ಲಿ ನೋಡಲಾಗಿದೆಯೆಂದು ಹೇಳುವುದನ್ನು ಸಂದೇಹಿಸಲಾಗದು. ಅಪೀಲುದಾರ ಮತ್ತು ಮೃತನ ನಡುವೆಯಿರುವ 50/– ರೂಪಾಯಿಗಳನ್ನು ಪಾವತಿಸಲು ವಾಗ್ದಾನ ಮಾಡಿದ್ದಾನೆ ಮತ್ತು ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಯ ಗ್ರಹಿಕೆಯು, 50/– ರೂಪಾಯಿಗಳಿಗಾಗಿ ಕೊಲೆ ಮಾಡಿದ್ದಾನೆಂದು ಊಹಿಸಲಾಗದು ಎಂಬ ವ್ಯವಹರಣೆಯು ಮಾತ್ರವಾಗಿರುವುದರಿಂದ ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಯು ಒಟ್ಟು ಉದ್ದೇಶದ ಕೊರತೆಯಿಂದ, ಕೂಡಿದೆಯೆಂದು ವಾದವನ್ನು ಮಂಡಿಸಿದ್ದಾರೆ. ದೂರದ ಕುಗ್ರಾಮವೊಂದರಲ್ಲಿ ಇದರ ಸಾಧ್ಯತೆಯಿದ್ದು, ವ್ಯಕ್ತಿಗಳು ಒಳಗೊಂಡಿರುವುದರ ಮೇಲೆ ಅವಲಂಬಿಸಿದೆ ಎಂಬುದು ಮತ್ತು ಹಣದ ಮೌಲ್ಯವು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುತ್ತದೆ. ಪ್ರಾಸಿಕ್ಯೂಷನ್ ಪ್ರಕರಣವು, ಹಣವನ್ನೊಳಗೊಂಡಿದ್ದರೂ, ಚಿಕ್ಕ ಹಣವು, ಆ ಕಾರಣದ ಮೇಲೆ ಕೊಲೆ ಮಾಡುವ ಸಾಧ್ಯತೆಯಿದ್ದು, ಅಲ್ಲಗೆಳೆಯಲಾಗದು ಅಥವಾ ತಳ್ಳಿಹಾಕಲಾಗದು ಮತ್ತು ಹಾಗಾಗಿ, ಅವನು, ಮೃತನ ಜೊತೆಯಲ್ಲಿರುವುದನ್ನು ಕಡೆಯದಾಗಿ ನೋಡಿರುವಾಗ ಮತ್ತು ತೀರಾ ವಿಳಂಭದ ಅವಧಿಯ ತರುವಾಯವಲ್ಲದೆ ಮೃತದೇಹ ಕಂಡುಬಂದಿದ್ದು ಆದರೆ, ಕೂಡಲೇ ತದನಂತರ, ಆರೋಪಿಯ ತಪ್ಪಿನ ಅಂಶವು ತಪ್ಪಿ ಹೋಗದ ಹಾಗೆಯಿದೆ ಮತ್ತು ಆ ಸಂಗತಿಯಿಂದ ತಪ್ಪಿಸಿಕೊಂಡಿಲ್ಲ ಹಾಗೂ ತರುವಾಯದ ದಿನದಂದು ಅಪರಾಹ್ನ 4ರಲ್ಲಿ ಅವನನ್ನು ದಸ್ತಗಿರಿ ಮಾಡಲಾಗಿದ್ದು, ಆರೋಪಿಯ ಪ್ರಕರಣವು ಸಹ ಮುಂಚಿತವಾಗಿರದೇ, ಅಪೀಲುದಾರನು, ಕಾನೂನಿಗೆ ಹೆದರದ ನಾಚಿಕೆಗೆಟ್ಟ

ಮನುಷ್ಯನಾಗಿದ್ದಾನೆಂಬುದನ್ನು ಮಾತ್ರ ಸೂಚಿಸುತ್ತದೆ ಮತ್ತು ಅಧಿವಿಚಾರಣಾ ನ್ಯಾಯಾಲಯಗಳ ವಾದಗಳು ಲೋಪವಾಗಿರುವುದಿಲ್ಲ ಮತ್ತು ಸಾಕಷ್ಟು ಸಾಕ್ಷ್ಯ ಲಭ್ಯವಿದೆವೆಂಬ ಪ್ರತಿಪಾದನೆ ಮೇಲೆ ಅವನ ಪ್ರಕರಣವನ್ನು ಅವಲಂಬಿಸಿರುವಂತೆ ಕೋರಿದೆ. ವ್ಯಕ್ತಿಯನ್ನು, ಮೃತನೊಂದಿಗೆ ಕೊನೆಯಲ್ಲಿ ನೋಡಿದ್ದಲ್ಲಿ, ಅವನು, ಹೇಗೆ ಮತ್ತು ಯಾವಾಗ ಅವನಿಂದ ಬೇರಾದ ಎಂಬ ವಿವರವನ್ನು ನೀಡುವುದು ಅಗತ್ಯವಾದುದೆಂದು ಹೇಳಲಾಗಿದೆಯೆಂದು ಅಪೀಲುದಾರನ ಪರವಾಗಿ ಮಾನ್ಯ ನ್ಯಾಯುವಾದಿಯು ಮೇಲೆ ಅವಲಂಬಿಸಿದ ತೀರ್ಮಾನದಲ್ಲಿ ಸರ್ವೋಚ್ಚ ನ್ಯಾಯಾಲಯದಿಂದ ಹೇಳಲಾಗಿದೆಯೆಂದು ಅವರು ಮುಂದುವರೆದು ವಾದವನ್ನು ಮಂಡಿಸಿದ್ದಾರೆ. ಅವನು, ನಿರೀಕ್ಷಿಸಬಹುದಾದಂತೆ ಮತ್ತು ತೃಪ್ತಿಕರವಾಗಿ ಈ ನ್ಯಾಯಾಲಯಕ್ಕೆ ಹಾಜರಾಗಿ ವಿವರವನ್ನು ನೀಡುವುದು. ಅವನು ಹಾಗೇ ಮಾಡಿದಲ್ಲಿ ಅವನು, ತನ್ನ ಹೊಣೆಯಿಂದ ಬಿಡುಗಡೆಗೊಳ್ಳತಕ್ಕದ್ದು. ತನ್ನ ವಿಶೇಷ ತಿಳುವಳಿಕೆಯ ಸಂಗತಿಗಳ ಆಧಾರದ ಮೇಲೆ ವಿವರವನ್ನು ನೀಡಲು ಅವನು ವಿಫಲವಾದಲ್ಲಿ, ಸಾಕ್ಷ್ಯ ಅಧಿನಿಯಮದ 106ನೇ ಪ್ರಕರಣದ ಮೂಲಕ ಅವನ ಮೇಲೆ ಹೊಣೆಯಿಂದ ವಿಧಿಸಲಾದ ಅವನನ್ನು ಬಿಡುಗಡೆಗೊಳಿಸಲಾಗುವುದಿಲ್ಲ. ಆದ್ದರಿಂದ, ಮೃತನ ಜೊತೆ ಅವನು ಯಾವಾಗ ಬೇರಾದ ಎಂಬುದನ್ನು ವಿವರಿಸಲು ಅಪೀಲುದಾರನ ಕಡೆಯಿಂದ ಯಾವುದೇ ಪ್ರಯತ್ನ ಮಾಡದೇ ಇರುವಾಗ, ಸಂದರ್ಭಗಳ ಸರಣಿಯ ಜೊತೆಗೆ ಸೇರಿಸಲಾಗುವುದೆಂದು ಅವರು ವಾದವನ್ನು ಮಂಡಿಸಿದ್ದಾರೆ. ಆದ್ದರಿಂದ, ಪ್ರಾಸಿಕ್ಯೂಷನ್ ಪ್ರಕರಣವನ್ನು, ಮುಂದುವರೆದು ಆ ಕಾರಣದ ಮೇಲೆ ದೃಢೀಕರಿಸಿದೆ.

5. ಇದಲ್ಲದೆ, ಅಪೀಲುದಾರನ ಪರವಾಗಿ ಮಾನ್ಯ ನ್ಯಾಯವಾದಿಯು, ಪ್ರತ್ಯುತ್ತರದ ಮೂಲಕ ಸಂದರ್ಭಗಳ ಸರಣಿಯಾಗಿದ್ದಲ್ಲಿ, ಅದು, ಪ್ರಾಸಿಕ್ಯೂಷನ್ ಪ್ರಯೋಜನಕ್ಕೆ ನಿಶ್ಚಿತವಾಗಿ ದೊರಕುತ್ತಿದ್ದು, ಆರೋಪಿಯು ನೀಡಿದ ಅಂಥ ವಿವರದ ಕೊರತೆಯು, ಸಂದರ್ಭಗಳ ಸರಣಿಯಲ್ಲಿ ಜೊತೆಯಲ್ಲಿ ಸೇರಿಸತಕ್ಕದ್ದೆಂದು ಹೇಳಲಾಗಿದೆ. ಸಂದರ್ಭಗಳ ಸರಣಿಯನ್ನು, ಸುಸ್ಥಾಪಿತಲಾಗದಿರುವಾಗ ಸಂದರ್ಭಗಳ ಸರಣಿಯ ಜೊತೆಗೆ ಸೇರಿಸುವ ಪ್ರಶ್ನೆಯು ನಿರರ್ಥಕವಾಗಿ ಚಲಾಯಿಸಿದೆ. ಇಲ್ಲಿ ಯಾವುದೇ ಹೆಚ್ಚುವರಿ ಸರಣಿಯ

ಕೊಂಡಿ ಇರುವುದಿಲ್ಲ ಮತ್ತು ಪ್ರಾಸಿಕ್ಯೂಷನ್, ಆರೋಪವನ್ನು ಖಚಿತವಾಗಿ ರುಜುವಾತು ಪಡಿಸಲು ವಿಫಲವಾಗಿರುವುದು ಕಂಡು ಬರುತ್ತದೆ ಮತ್ತು ಎಲ್ಲಾ ಯುಕ್ತ ಸಂದೇಹಗಳನ್ನು ಮೀರಿದ ಪ್ರಕರಣ, ಸುಸ್ಥಾಪಿತವಾಗಿಲ್ಲವೆಂದು ಅವರು ವಾದವನ್ನು ಮಂಡಿಸಿದ್ದಾರೆ.

6. ಪ್ರಕರಣದ ಮೇಲಿನ ಸಂದರ್ಭಗಳಲ್ಲಿ, ಆರೋಪಿ ಮತ್ತು ಮೃತನ ನಡುವಿನ ಸಂಬಂಧವು ಅದರಲ್ಲಿದ್ದಂತೆ ತಾಂಡಾಕ್ಕೆ ಅವನ ಜೊತೆಯಲ್ಲಿರಲು ಮೃತನನ್ನು ಕೋರಿರುವುದಾಗಿ ಹೇಳಿದ್ದು, ಬಹುತೇಕ ಅದು ಮಬ್ಬುಗತ್ತಲೆಯಲ್ಲಿ ಅವನು, ಆರೋಪಿಯ ಜೊತೆಯಲ್ಲಿರಲು ತಿರಸ್ಕರಿಸಿದ್ದಾನೆ. ಆರೋಪಿಯು, 50/– ರೂಪಾಯಿಗಳನ್ನು ನೀಡುತ್ತೇನೆಂದು ವಾಗ್ದಾನ ಮಾಡಿದಾಗ, ಅವನು ಒಪ್ಪಿಕೊಂಡಿದ್ದಾನೆ. ಮೃತನು ಮತ್ತು ಆರೋಪಿಯ ನಡುವೆ ಹೊಡೆದಾಟವಾಗಿದ್ದರೂ, ಆರೋಪಕ್ಕೊಳಪಡಿಸುವ ಇತರೇ ಸಂದರ್ಭಗಳ ಹೊರತಾಗಿ, ಮೃತನ ಕತ್ತು ಹಿಸುಕಿ ಸಾಯಿಸಿರುವುದಕ್ಕೆ ಆರೋಪಿಯು ಯಾವುದೇ ಕಾರಣ ನೀಡಿಲ್ಲ, ಕೊಲೆ ಮಾಡುವ ಅಂಥ ಉದ್ದೇಶ ಸಹ ಸ್ಪಷ್ಟಪಡಿಸಿಲ್ಲ. ವ್ಯವಹರಣೆ ಮಾತ್ರದಿಂದಲೇ ಅಪರಾಧ ಮಾಡುವುದಕ್ಕೆ ಕಾರಣವಾಗಿರುವುದಿಲ್ಲ. ಆದ್ದರಿಂದ, ಪ್ರಾಸಿಕ್ಯೂಷನ್ ಇಡೀ ಪ್ರಕರಣವು, ಪ್ರಾ.ಸಾ. 4, 5 ಮತ್ತು 6ರ ಸಾಕ್ಷ್ಯದ ಮೇಲೆ ಅವಲಂಬಿಸಿದ್ದು, ಅದು, ಆರೋಪವನ್ನು ಖಚಿತವಾಗಿ ರುಜುವಾತುಪಡಿಸುವುದಕ್ಕೆ ತಕ್ಕಷ್ಟಿಲ್ಲವಾಗಿದೆ. ಅಧಿವಿಚಾರಣಾ ನ್ಯಾಯಾಲಯ, ಆರೋಪದ ಸಾಧ್ಯತೆಯನ್ನು ಕಟ್ಟುಕಥೆಯಂತೆ ಹೇಳಿದೆ ದೂರದ ಪ್ರದೇಶಕ್ಕೆ ಸೇರಿರುವ ಮೃತನಿಗೆ 50/– ರೂ.ಗಳೂ ಸಹಾ ಒಳ್ಳೆಯ ಮೊತ್ತವೆ ಆಗಿದ್ದು, ಅದು ಅತ್ಯಂತ ಮೌಲ್ಯ ಉಳ್ಳದ್ದೆಂದೂ ಪರಿಗಣಿಸಲಾಗಿದೆ. ಆದ್ದರಿಂದ, ಅದೇ ವ್ಯವಹರಣೆಯು ಆ ಉದ್ದೇಶವನ್ನು ಹೊಂದಿದ ಸಾಧ್ಯತೆಯೆಂಬುದನ್ನು ತಳ್ಳಿಹಾಕಲಾಗದು, ವಶದಲ್ಲಿಟ್ಟುಕೊಳ್ಳಲಾಗದು. ದೂರದ ಪ್ರದೇಶ ಅಥವಾ ಪಟ್ಟಣ ಪ್ರದೇಶವೇ ಆಗಿರಲಿ, 50/– ರೂಪಾಯಿಗಳ ಮೌಲ್ಯವು, 50/– ರೂಪಾಯಿಗಳೇ ಆಗಿದ್ದು, ರೂಪಾಯಿಯ ಖರೀದಿ ಮೌಲ್ಯಕ್ಕಾಗಿ ಇದನ್ನು ಪುನಃ ಒಪ್ಪಲಾಗದು. ಹಾಗಾಗಿ, ವ್ಯವಹರಣೆಯೊಂದೆ, ಆರೋಪಿಯಿಂದ ಮಾಡಿದ ಕಾರ್ಯಕ್ಕಾಗಿ ಉಂಟಾಗಿದೆವೆಂಬುದನ್ನು ಮನಃಪೂರ್ವಕವಾಗಿ ಒಪ್ಪಲಾಗದು. ಪ್ರಾ.ಸಾ. 4, 5

ಮತ್ತು 6ರ ಸಾಕ್ಷ್ಯಗಳು ಆರೋಪಿಯ ವಿರುದ್ಧ ಖಚಿತವಾದ ಆರೋಪಗಳನ್ನು ರುಜುವಾತುಪಡಿಸುವ ಕೊನೆಯದಾಗಿ ನೋಡಿದ ವಾದಕ್ಕೆ ಪೂರಕವಾಗಿವೆಯೆ ಎಂಬುದು ಈ ವ್ಯವಹರಣೆಗಳ ಪೀಠಿಕೆಯಲ್ಲಿ ಮತ್ತೊಂದು ಪ್ರಶ್ನೆಯಾಗಿದೆ. ಸರ್ವೋಚ್ಚ ನ್ಯಾಯಾಲಯ ಹೇಳಲಾದಂತೆ, ಅದರ ಮೇಲೆ ಸಂಬಂಧಿಸಿದ ವಿವಿಧ ಸಂಗತಿಗಳು, ಕೊನೆಯಲ್ಲಿ ನೋಡಿದ ವಾದದ ಮೇಲೆ ಕಂಡು ಬರುತ್ತದೆ. ಸಂದರ್ಭಗಳ ಸರಣಿಯು, ಆರೋಪಿಯಿಂದ ಮಾಡಿದ ಕೊಲೆಯ ಪ್ರತಿಯೊಂದು ಸಾಧ್ಯತೆಯಿದೆಯೆಂದು ಕಂಡು ಬಂದಲ್ಲಿ ಮತ್ತು ಅದರ ಸಾಧ್ಯತೆಯಾಗಿ ಕೊನೆಯದಾಗಿ ನೋಡಿದ ವಾದದ ಮೇಲೆ ಅವಲಂಬಿಸಬಹುದಾಗಿದೆ. ಕೇವಲ ಸಣ್ಣ ವ್ಯವಹರಣೆಯ ಪ್ರವೇಶಿಕೆಯನ್ನು ಹೊರತುಪಡಿಸಿ ಯಾವುದೇ ಸಂದರ್ಭವಿಲ್ಲದಿರುವ ಮತ್ತು ದಿನಾಂಕ 30.6.2010 ರಂದು ಸುಮಾರು ರಾತ್ರಿ 9ರಲ್ಲಿ ಕೊನೆಯದಾಗಿ ಕಂಡು ಬಂದಿದ್ದು ಎಂಬುದು ಮಾತ್ರ ಆರೋಪಿಯು, ಮೃತನನ್ನು ಕೊಲೆ ಮಾಡಿರುವುದಕ್ಕಾಗಿ ಸಾಕಾಗುವಷ್ಟು ಉದ್ದೇಶವನ್ನು ಹೊಂದಿದೆಯೆಂದು ನಿರ್ಣಯಕ್ಕೆ ಬರಲು ಸಾಕಾಗುವುದಿಲ್ಲ. ಇದಲ್ಲದೇ, ಮೃತನನ್ನು, ಕೊನೆಯಲ್ಲಿ ಎಲ್ಲಿ ನೋಡಲಾಯಿತು ಮತ್ತು ಅವನು ಮೃತನಾಗಿರುವುದು ಕಂಡು ಬಂದಿದ್ದು ಎಲ್ಲಿ ಎಂಬುದು ಮಹತ್ವವಾಗಿದೆ ಹಾಗೂ ಸಮಯದ ಅಂತರ ಸಾಕಷ್ಟು ದೀರ್ಘವಾಗಿರುವ ಕಾರಣ ಕೊನೆಯಲ್ಲಿ ನೋಡಿದ ವಾದವು ಇದಕ್ಕೆ ಪೂರಕವಾಗಿರುವುದಿಲ್ಲವೆಂದು ಸಹ ಸರ್ವೋಚ್ಚ ನ್ಯಾಯಾಲಯ ಹೇಳಿದೆ. ಪ್ರಸ್ತುತ ಪ್ರಕರಣದಲ್ಲಿ, ಆರೋಪಿ ಮತ್ತು ಮೃತನನ್ನು ರಾತ್ರಿ 9ರಲ್ಲಿ ಕೊನೆಯದಾಗಿ ನೋಡಲಾಗಿದ್ದು, ಪ್ರಾಸಾ.6ರ ಸಾಕ್ಷ್ಯವನ್ನು ಒಪ್ಪಿಕೊಂಡಲ್ಲಿ ಮತ್ತು ತದನಂತರ, ಅವನು ದಿನಾಂಕ 1.7.2010 ರಂದು ಬೆಳಗ್ಗೆ 6ರಲ್ಲಿ ಮರಣ ಹೊಂದಿರುವುದು ಕಂಡು ಬಂದಿದೆ. ಬಹುತೇಕ, ಸಮಯದ ಅಂತರ 9 ಗಂಟೆಗಳಾಗಿದೆ ಮತ್ತು ಮರಣೋತ್ತರ ಪರೀಕ್ಷೆ ವರದಿಯ ಅನುಸಾರವಾಗಿ, ಮರಣೋತ್ತರ ಪರೀಕ್ಷೆಗೆ ಮುಂಚೆ, 15 ರಿಂದ 20 ಗಂಟೆಗಳ ಮುಂಚೆ ಮರಣ ಸಂಭವಿಸಿರಬಹುದು ಮತ್ತು ಮರಣೋತ್ತರ ಪರೀಕ್ಷೆಯನ್ನು, ದಿನಾಂಕ 01.07.2010 ರಂದು ಸಂಜೆ 4ರಲ್ಲಿ ನಡೆಸಲಾಗಿದೆಯೆಂಬುದು ಸ್ಪಷ್ಟವಾಗಿದೆ. ಆದ್ದರಿಂದ, ಮರಣದ ಸಮಯವು, ಮೃತನನ್ನು ಕತ್ತು ಹಿಸುಕಿ ಸಾಯಿಸಿರುವ ಸಾಧ್ಯತೆ ಆ ಸಮಯಕ್ಕೆ ಸುಸಂಗತವಾಗಿರುವುದಿಲ್ಲ.

ಅದಕ್ಕನುಸಾರವಾಗಿ, ಪ್ರಾಸಿಕ್ಯೂಷನ್, ಆರೋಪಿ ಮತ್ತು ಮೃತನು, ಕೊನೆಯಲ್ಲಿ ಜೊತೆಗಿರುವುದು ಕಂಡು ಬಂದಿದೆಯೆಂಬುದನ್ನು ಒತ್ತಿ ಹೇಳಿರುವುದನ್ನು ಹೊರತುಪಡಿಸಿ ಒಟ್ಟಾರೆ ರುಜುವಾತುಪಡಿಸುವಂತಹ ಘಟನೆಗಳ ಸರಣಿಯ ಘಟನೆಗಳನ್ನು ಸುಸ್ಥಾಪಿಸಿರುವುದಿಲ್ಲ. ಕೊನೆಯಲ್ಲಿ ನೋಡಿದ ವಾದದ ಆಧಾರದ ಮೇಲೆ ಸಹಾ ಅದು ಪ್ರಕರಣವನ್ನು ರುಜುವಾತುಪಡಿಸಲು ವಿಫಲವಾಗಿರುವುದು ಕಂಡುಬರುತ್ತದೆ. ಮೇಲೆ ಹೇಳಲಾದ ಅನೇಕ ಪ್ರಕರಣಗಳಲ್ಲಿ ಉಲ್ಲೇಖಿಸಲಾದಂತೆ ಈ ಪ್ರಕರಣದಲ್ಲಿ ಒತ್ತಿಹೇಳುವ ಯಾವುದೂ ಸಾಕಷ್ಟಿರುವುದಿಲ್ಲ.

ಅದಕ್ಕನುಸಾರವಾಗಿ, ಅಪೀಲನ್ನು ಅಂಗೀಕರಿಸಲಾಗಿದೆ. ಆರೋಪಿಯನ್ನು, ಖುಲಾಸೆಗೊಳಿಸಿದೆ.

---